## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 736 (691) |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | : | 12/12/2025 |
| ಉತ್ತರಿಸುವ ಸಚಿವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ವೃದ್ಧಾಪ್ಯ ಮನೆಗಳು ಎಷ್ಟು; ಮತ್ತು ರಾಜ್ಯದಲ್ಲಿರುವಂತಹ ಅಂಗವಿಕಲರ ಶಾಲೆಗಳೇಷ್ಟು: | • ಪ್ರಸ್ತುತ ರಾಜ್ಯದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ವತಿಯಿಂದ ಜಿಲ್ಲೆಗೊಂದರಂತೆ ಮತ್ತು ಕಂದಾಯ ಉಪ ವಿಭಾಗಕ್ಕೆ ಒಂದರಂತೆ ಒಟ್ಟು 65 ವೃದ್ಧಾಶ್ರಮಗಳಿರುತ್ತವೆ.<br>• ರಾಜ್ಯದಲ್ಲಿರುವಂತಹ ಸರ್ಕಾರದ ವತಿಯಿಂದ ನಡೆಯುತ್ತಿರುವ ಸರ್ಕಾರಿ ವಸತಿಯುತ ವಿಶೇಷ ಶಾಲೆಗಳ ಸಂಖ್ಯೆ:**09**<br>• 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳ ಸಂಖ್ಯೆ:33 ಅಂಗವಿಕಲ ಮಕ್ಕಳ ವಿಶೇಷ ಶೈಕ್ಷಣಿಕ ಯೋಜನೆಯಡಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿರುವ ವಿಶೇಷ ಶಾಲೆಗಳ ಸಂಖ್ಯೆ:**164** ಹೀಗೆ ಒಟ್ಟು ಶಾಲೆಗಳ ಸಂಖ್ಯೆ:**206** |
| ಆ) | ಯಾವ ಮಾನದಂಡದಡಿ ಈ ಶಾಲೆಗಳನ್ನು ನಿರ್ವಹಿಸಲಾಗುತ್ತಿದೆ: ನೀಡುತ್ತಿರುವಂತಹ ಅನುದಾನ ವಿವರವನ್ನು ಮಾಹಿತಿಯೊಂದಿಗೆ ಸಲ್ಲಿಸುವುದು: | ಈ ಶಾಲೆಗಳನ್ನು ನಿರ್ವಹಿಸಲು ಇರುವಂತಹ ಮಾನದಂಡಗಳು ಹಾಗೂ ಯೋಜನೆಯ/ ಶಾಲೆಗಳ ನಿರ್ವಹಣೆಗಾಗಿ ನೀಡಲಾಗುವ ಅನುದಾನದ ವಿವರವಾದ ಮಾಹಿತಿಯನ್ನು **ಅನುಬಂಧ-1 ರಲ್ಲಿ ಒದಗಿಸಲಾಗಿದೆ.** |
| ಇ) | ಹೊಸದಾಗಿ ಜಿಲ್ಲಾ ರಾಜ್ಯ ಮಟ್ಟದಲ್ಲಿ ಶಾಲೆಗಳನ್ನು ತೆರೆಯಲು ಇರುವ ಪ್ರಸ್ತಾವನೆಗಳೆಷ್ಟು: | ಅಂಗವಿಕಲ ಮಕ್ಕಳ ವಿಶೇಷ ಶೈಕ್ಷಣಿಕ ಯೋಜನೆಯಡಿ ಸ್ವಯಂ ಸೇವಾ ಸಂಸ್ಥೆಯವರು ಇಲಾಖೆಯಿಂದ ಅನುಮತಿ ಪಡೆದು ಶಾಲೆ ಪ್ರಾರಂಭಿಸಿದ 3 ವರ್ಷದ ನಂತರ ಸಹಾಯಧನದ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಿ, ಸೂಕ್ತ ತಪಾಸಣಾ ವರದಿಯೊಂದಿಗೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಮಟ್ಟದ ಸಮಿತಿಯ ಶಿಫಾರಸ್ಸಿನೊಂದಿಗೆ ಪ್ರಧಾನ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವುದು ಈ ವಿಶೇಷ ಶಾಲೆಗಳನ್ನು ಅನುದಾನಕ್ಕೊಳಪಡಿಸಲು 2024-25ನೇ ಸಾಲಿನಲ್ಲಿ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ ಪ್ರಸ್ತಾವನೆಗಳನ್ನು ಮಂಡಿಸಿ 16 ಪ್ರಸ್ತಾವನೆಗಳನ್ನು ಆಡಳಿತಾತ್ಮಕ ಮಂಜೂರಾತಿ ನೀಡುವ ಸಂಬಂಧ ಆರ್ಥಿಕ ಇಲಾಖೆಯ ಸಹಮತಿ/ಅಭಿಪ್ರಾಯ ಕೋರಿ ಸಲ್ಲಿಸಲಾಗಿರುತ್ತದೆ. |

| | | |
|---|---|---|
| ಈ) | ರಾಜ್ಯ ವ್ಯಾಪ್ತಿಯಲ್ಲಿ ಹೊಸದಾಗಿ ತೆರೆಯಲು ಉದ್ದೇಶಿಸಿರುವ ಕೇಂದ್ರದ ನೆರವು ರಾಜ್ಯದ ನೆರವಿನ ಸಂಸ್ಥೆಗಳೆಷ್ಟು; | ರಾಜ್ಯ ವ್ಯಾಪ್ತಿಯಲ್ಲಿ ಹೊಸದಾಗಿ ತೆರೆಯಲು ಉದ್ದೇಶಿಸಿರುವ ಕೇಂದ್ರದ ಹಾಗೂ ರಾಜ್ಯದ ನೆರವಿನ ಸಂಸ್ಥೆಗಳು ಯಾವುದು ಇರುವುದಿಲ್ಲ. |
| ಉ) | ರಾಜ್ಯದಲ್ಲಿರುವ ಅಂಗವಿಕಲ / ವಿಕಲಚೇತನ ಶಾಲೆಗಳು ಮತ್ತು ವೃದ್ಧಾಪ್ಯ ಕೇಂದ್ರದಲ್ಲಿರುವವರ ಸಂಖ್ಯೆ ಎಷ್ಟು; ಹಾಗೂ ನಿಗದಿ ಮಾಡಿರುವಂತಹ ವಾರ್ಷಿಕ ಅನುದಾನ ಎಷ್ಟು? | • ರಾಜ್ಯದಲ್ಲಿರುವ ಅಂಗವಿಕಲ/ ವಿಕಲಚೇತನ ಮಕ್ಕಳಿಗಾಗಿ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿ ಒಟ್ಟು 14209 ಮಕ್ಕಳು ವ್ಯಾಸಂಗ ಮಾಡುತ್ತಿರುತ್ತಾರೆ. ವಾರ್ಷಿಕವಾಗಿ ರೂ.8800.00 ಲಕ್ಷಗಳ ಅನುದಾನ ನಿಗದಿಯಾಗಿರುತ್ತದೆ.<br>• ರಾಜ್ಯದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ವೃದ್ಧಾಶ್ರಮಗಳಲ್ಲಿ ಪ್ರತಿ ಕೇಂದ್ರದಲ್ಲಿ 25 ಫಲಾನುಭವಿಗಳಂತೆ 65 ವೃದ್ಧಾಶ್ರಮಗಳಲ್ಲಿ 1625 ಹಿರಿಯ ನಾಗರಿಕರಿದ್ದು, ವಾರ್ಷಿಕವಾಗಿ ರೂ.768.00 ಲಕ್ಷಗಳ ಅನುದಾನ ನಿಗದಿಯಾಗಿರುತ್ತದೆ. |

**ಸಂಖ್ಯೆ:ಮಮಇ 404 ಪಿಹೆಚ್‌ಪಿ 2025**

**(ಲಕ್ಷ್ಮೀ ಆರ್, ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು

## ಅನುಬಂಧ-1

**ಸರ್ಕಾರಿ ವಿಶೇಷ ಶಾಲೆಗಳು:**

**ಅ) ಶ್ರವಣದೋಷವುಳ್ಳ ಮಕ್ಕಳಿಗಾಗಿ ಸರ್ಕಾರದ ವತಿಯಿಂದ ನಡೆಸುತ್ತಿರುವ ವಸತಿಯುತ ಶಾಲೆಗಳು: 05**

ಶ್ರವಣದೋಷವುಳ್ಳ ಮಕ್ಕಳಿಗಾಗಿ 1 ರಿಂದ 10ನೇ ತರಗತಿಯವರೆಗಿನ ವಿಶೇಷ ಶಾಲೆಗಳನ್ನು ನಡೆಸಲಾಗುತ್ತಿದೆ.

1. ಬೆಂಗಳೂರು ನಗರ ಜಿಲ್ಲೆ,
2. ಮೈಸೂರು,
3. ಕಲಬುರ್ಗಿ,
4. ಬಳ್ಳಾರಿ ಮತ್ತು
5. ಬೆಳಗಾವಿ

ಈ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ವಸತಿ, ಊಟ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಶಾಲೆಗಳ ಪೈಕಿ ಶ್ರವಣದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ಬೆಳಗಾವಿಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

**ವಿಶೇಷ ಶಾಲೆಯಲ್ಲಿ ಮಕ್ಕಳನ್ನು ದಾಖಲಿಸಲು ಸಲ್ಲಿಸಬೇಕಾದ ದಾಖಲೆಗಳು:**

1. ಮಕ್ಕಳ ವಯೋಮಿತಿ 6 ವರ್ಷ ಆಗಿರಬೇಕು.
2. ಹುಟ್ಟಿದ ದಿನಾಂಕದ ಬಗ್ಗೆ ಜನನ ಪ್ರಮಾಣ ಪತ್ರ.
3. ವೈದ್ಯಕೀಯ ಪ್ರಮಾಣ ಪತ್ರ (ಯು.ಡಿ.ಐ.ಡಿ ಕಾರ್ಡ್)
4. ಜಾತಿ ಪ್ರಮಾಣ ಪತ್ರ.
5. ವಿದ್ಯಾರ್ಥಿಯ ಇತ್ತೀಚಿನ ಭಾವಚಿತ್ರ/ಆಧಾರ್ ಕಾರ್ಡ್.
6. ಸಾಮಾನ್ಯ ಶಾಲೆಗಳಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗದ ಶ್ರವಣದೋಷವುಳ್ಳವರಿಗೆ.
7. ಇತರೆ ಶಾಲೆಯಿಂದ ವರ್ಗಾವಣೆಯಾಗಿ ಬಂದಿದ್ದಲ್ಲಿ ವರ್ಗಾವಣೆ ಪ್ರಮಾಣ ಪತ್ರ.

**ಆ) ಅಂಧ ಮಕ್ಕಳಿಗಾಗಿ ಸರ್ಕಾರದ ವತಿಯಿಂದ ನಡೆಸುತ್ತಿರುವ ವಸತಿಯುತ ಶಾಲೆಗಳು:- 04**

ದೃಷ್ಟಿದೋಷವುಳ್ಳ 1 ರಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ.

1. ಗುಲ್ಬರ್ಗಾ,
2. ಮೈಸೂರು,
3. ದಾವಣಗೆರೆ.
4. ಹುಬ್ಬಳ್ಳಿ ನಗರಗಳಲ್ಲಿ ವಿಶೇಷ ಶಾಲೆಗಳನ್ನು ಸ್ಥಾಪಿಸಲಾಗಿದೆ. ಈ ಶಾಲೆಗಳ ಪೈಕಿ ಅಂಧ
   a. ಹೆಣ್ಣು ಮಕ್ಕಳಿಗಾಗಿ ದಾವಣಗೆರೆಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.
5. ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಹಾಗೂ ಇತರೆ ಸೌಲಭ್ಯವನ್ನು ಒದಗಿಸಲಾಗುವುದು.

**ವಿಶೇಷ ಶಾಲೆಯಲ್ಲಿ ಮಕ್ಕಳನ್ನು ದಾಖಲಿಸಲು ಸಲ್ಲಿಸಬೇಕಾದ ದಾಖಲೆಗಳು:**

1. ಮಕ್ಕಳ ವಯೋಮಿತಿ 6 ವರ್ಷಗಳಾಗಿರಬೇಕು.
2. ಹುಟ್ಟಿದ ದಿನಾಂಕದ ಬಗ್ಗೆ ಜನನ ಪ್ರಮಾಣ ಪತ್ರ.
3. ವೈದ್ಯಕೀಯ ಪ್ರಮಾಣ ಪತ್ರ (ಯು.ಡಿ.ಐ.ಡಿ ಕಾರ್ಡ್).
4. ಜಾತಿ ಪ್ರಮಾಣ ಪತ್ರ.
5. ವಿದ್ಯಾರ್ಥಿಯ ಇತ್ತೀಚಿನ ಭಾವಚಿತ್ರ/ಆಧಾರ್ ಕಾರ್ಡ್
6. ಸಾಮಾನ್ಯ ಶಾಲೆಗಳಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗದ ದೃಷ್ಟಿದೋಷವುಳ್ಳವರು.
7. ಇತರೆ ಶಾಲೆಯಿಂದ ವರ್ಗಾವಣೆಯಾಗಿ ಬಂದಿದ್ದಲ್ಲಿ ವರ್ಗಾವಣೆ ಪ್ರಮಾಣ ಪತ್ರ

1. **ಸ್ವಯಂಸೇವಾ ಸಂಸ್ಥೆಗಳ ಮುಖಾಂತರ ನಡೆಸುತ್ತಿರುವ ರಾಜ್ಯ ಅನುದಾನಿತ ವಿಶೇಷ ಶಾಲೆಗಳು:**

ಇಲಾಖೆಯ ಅಂಗವಿಕಲ ಮಕ್ಕಳ ಶಿಶು ಕೇಂದ್ರೀಕೃತ ಯೋಜನೆಯಡಿ ಬುದ್ಧಿಮಾಂದ್ಯ (ಸೆರಬ್ರಲ್ ಪಾಲ್ಸಿ, ಆಟಿಸಂ), ದೃಷ್ಟಿದೋಷ, ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಹಾಗೂ ವಸತಿರಹಿತ ಶಾಲೆಗಳು ಸೇರಿದಂತೆ ಒಟ್ಟು 164 ವಿಶೇಷ ಶಾಲೆಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ.

ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿರುವ ವಿಶೇಷ ಶಾಲೆಗಳಿಗೆ, ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಸಹಾಯ ಧನ ನೀಡಲು 2010-11ನೇ ಸಾಲಿನಿಂದ ಈ ಯೋಜನೆಯು ಜಾರಿಗೆ ಬಂದಿರುತ್ತದೆ. ಸದರಿ ಯೋಜನೆಯಡಿ ಹಾಲಿ 164 ವಿಶೇಷ ಶಾಲೆಗಳು ನಡೆಯುತ್ತಿರುತ್ತವೆ. ಈ ಶಾಲೆಗಳ ನಿರ್ವಹಣೆಗಾಗಿ ರಾಜ್ಯ ಸರ್ಕಾರದಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಈ ಅನುದಾನದಲ್ಲಿ ಶಿಕ್ಷಕರ ಗೌರವಧನ, ಪಥ್ಯಾಹಾರ ವೆಚ್ಚ, ವೈದ್ಯಕೀಯ ವೆಚ್ಚ, ಸಮವಸ್ತ್ರ, ಭತ್ಯೆ, ಸಾರಿಗೆ ಭತ್ಯೆ, ಕಟ್ಟಡದ ಬಾಡಿಗೆ / ನಿರ್ವಹಣಾ ವೆಚ್ಚ, ಸಾದಿಲ್ವಾರು ವೆಚ್ಚ ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

**ಯೋಜನೆಯ ಉದ್ದೇಶ:**

- ಸಂವಿಧಾನದಲ್ಲಿ ಸರ್ವರಿಗೂ ಶಿಕ್ಷಣ ನೀಡಲು ಸೂಚಿಸಿದಂತೆ ವಿಕಲಚೇತನ ಮಕ್ಕಳಿಗೂ ಶಿಕ್ಷಣದ ಹಕ್ಕನ್ನು ನೀಡುವುದು.
- ಎಲ್ಲಾ ವಿಕಲಚೇತನ ಮಕ್ಕಳಿಗೂ ಶೈಕ್ಷಣಿಕ ಸೌಲಭ್ಯ ಒದಗಿಸುವುದು.
- ವಿಕಲಚೇತನ ಮಕ್ಕಳಲ್ಲಿ ಶೇ.100 ರಷ್ಟು ಸಾಕ್ಷರತೆಯನ್ನು ಮೂಡಿಸುವುದು.
- ವಿಕಲಚೇತನ ಮಕ್ಕಳ ಶೈಕ್ಷಣಿಕ ಕಾರ್ಯಕ್ರಮಕ್ಕೆ ಸ್ವಯಂ ಸೇವಾ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದು.
- ಕುಷ್ಠರೋಗ ನಿವಾರಿತ ವಿಕಲಚೇತನರಿಗೆ, ಮಾನಸಿಕ ಅಸ್ವಸ್ಥರಿಗೆ ಹಾಗೂ ತರಬೇತಿ ಪಡೆಯಲು ಅರ್ಹರಿರುವಂತಹ. ಬುದ್ಧಿಮಾಂದ್ಯರಿಗೆ ವೃತ್ತಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ ಪುನರ್ವಸತಿಗೆ ನೆರವು ನೀಡುವುದು.

**ಷರತ್ತುಗಳು:**

- ಸ್ವಯಂ ಸೇವಾ ಸಂಸ್ಥೆಯು ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರಕಾರ ನೊಂದಣಿಯಾಗಿರುವ ಚಾರಿಟಬಲ್ ಟ್ರಸ್ಟ್. ಸೊಸೈಟಿ ಅಥವಾ ಸಮಾಜ ಸೇವೆಯಲ್ಲಿ ತೊಡಗಿರುವ ಅಧಿಕಾರೇತರ ಸಂಸ್ಥೆಯಾಗಿರಬೇಕು. ಸ್ವಯಂ ಸೇವಾ ಸಂಸ್ಥೆಯು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 50, 51 ರಂತೆ ನೊಂದಣಿ ಮಾಡಿಸಿರಬೇಕು.
- ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಅನುಮತಿ ಪಡೆದಿರಬೇಕು.
- ಸಂಸ್ಥೆಯು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಯಾವುದೇ ರೀತಿಯ ಶುಲ್ಕ, ದೇಣಿಗೆ, ವಂತಿಗೆ ಮುಂತಾದವುಗಳನ್ನು. ಸ್ವೀಕರಿಸತಕ್ಕದ್ದಲ್ಲ.
- ಯಾವುದೇ ಸಂಸ್ಥೆಯು ಇಲಾಖೆಯಿಂದ ಅನುಮತಿ ಪಡೆದು ಶಾಲೆ ಪ್ರಾರಂಭಿಸಿದ 03 ವರ್ಷಗಳ ನಂತರ ರಾಜ್ಯ ಅನುದಾನಕ್ಕೆ ಒಳಪಡಿಸಲು. ಅರ್ಹವಾಗುವುದು.
- ಸಂಸ್ಥೆಯು ಯಾವುದೇ ಜಾತಿ ಮತ ಪರಿಗಣಿಸದೇ ಎಲ್ಲಾ ವಿಕಲಚೇತನ ಮಕ್ಕಳಿಗೂ ಮುಕ್ತವಾಗಿರಬೇಕು.
- ಸಹಾಯಧನ ಪಡೆಯುವ ಸಂಸ್ಥೆಯು ರಾಜ್ಯ ಸರ್ಕಾರದ ಅಧಿಕಾರಿಗಳ ಅಥವಾ ಇಲಾಖೆಯಿಂದ ದೃಢೀಕರಿಸಲ್ಪಟ್ಟ ಯಾವುದೇ. ವ್ಯಕ್ತಿಗಳ/ಸಂಸ್ಥೆಗಳ ತಪಾಸಣೆಗೆ ಸಿದ್ಧವಾಗಿರಬೇಕು./ ಮುಕ್ತವಾಗಿರಬೇಕು.
- ಶಾಲೆಯಲ್ಲಿ ಕನಿಷ್ಠ 25 ವಿದ್ಯಾರ್ಥಿಗಳು ದಾಖಲಾಗಿರಬೇಕು. ಶಾಲೆಯಲ್ಲಿ 20 ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಲ್ಲಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.
- ಶಾಲೆಯು ಶೈಕ್ಷಣಿಕ.ವರ್ಷದಲ್ಲಿ 220 ದಿನಗಳಿಗೆ ಕಡಿಮೆ ಇರದಂತೆ ಕಾರ್ಯನಿರ್ವಹಿಸಬೇಕು.
- ವಿಶೇಷ ಶಿಕ್ಷಕರ ಶೈಕ್ಷಣಿಕ ಅರ್ಹತೆಯು ಯೋಜನೆಯ ನಿಯಮಾನುಸಾರ ಇರತಕ್ಕದ್ದು.

**2. 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳು:**

1982ರ ರಾಜ್ಯ ಅನುದಾನ ಸಂಹಿತೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 33 ವಿಶೇಷ ಶಾಲೆ/ ತರಬೇತಿ ಕೇಂದ್ರಗಳನ್ನು ದೈಹಿಕ, ಅಂಧ, ಶ್ರವಣದೋಷ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗಾಗಿ ನಡೆಸಲಾಗುತ್ತಿದೆ.ರಾಜ್ಯ ಸರ್ಕಾರದಿಂದ ಅನುದಾನವನ್ನು ಜಿಲ್ಲಾ ಪಂಚಾಯತ್ ಮೂಲಕ ಬಿಡುಗಡೆ ಮಾಡಲಾಗುತ್ತಿದೆ.

**ಉದ್ದೇಶ:**

ವಿವಿಧ ವಿಕಲಚೇತನ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ಊಟ, ವಸತಿ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸಿ ಸಮಾಜದಲ್ಲಿ ಇತರೆ ಮಕ್ಕಳಂತೆ ವಿದ್ಯಾಭ್ಯಾಸವನ್ನು ಒದಗಿಸಲು ಉದ್ದೇಶಿಸಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ರಾಜ್ಯ ಸರ್ಕಾರವು ಜಿಲ್ಲಾ ಪಂಚಾಯಿತಿ ಮೂಲಕ ಅನುದಾನ ನೀಡುವ ಯೋಜನೆ.

**ಅರ್ಹತೆ:**

1. ಈ ಯೋಜನೆಯನ್ನು ಜಿಲ್ಲಾ ಪಂಚಾಯಿತಿಗಳ ವತಿಯಿಂದ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಜಾರಿಗೆ ತರಲಾಗುತ್ತಿದೆ.
2. ವಿವಿಧ ರೀತಿಯ ಅಂಗವಿಕಲತೆಗೆ ಸಂಬಂಧಿಸಿದಂತೆ ವಿಶೇಷ ಶಾಲೆಗಳಿಗೆ ರಾಜ್ಯ ಸರ್ಕಾರದಿಂದ ಶೇಕಡಾ 100 ರಷ್ಟು ವೇತನಾನುದಾನವನ್ನು ಒದಗಿಸಲಾಗುತ್ತಿದೆ.